# SRUJANI

ISSN: 2583-3510

## Indian Journal of Innovative Research and Development (SIJIRD)

Volume-1 (01), March-April 2022, Pp. 60-64

Bi-Monthly, Peer-Reviewed, Open Access, Indexed Journal

srujanifoundation@gmail.com

editor@srujani.in

www.srujani.in


# ಉಪ್ಪಾರ ಸಮುದಾಯದ ಶವಸಂಸ್ಕಾರ ಪದ್ಧತಿ


**ರಾಜೇಶ ಎಂ***

*ಸಂಶೋಧಕರು, ಜಾನಪದ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.



***Abstract:***

ವ್ಯಕ್ತಿಯೊಬ್ಬ ಸಾವನ್ನಪ್ಪಿದಾಗ ಅಂತಿಮವಾಗಿ ಅವನ ದೇಹವನ್ನು ಮಣ್ಣು ಮಾಡುವವರೆಗಿನ ಸಲ್ಲಿಸುವ ವಿಧಿ-ವಿಧಾನಗಳು, ಕೃತಜ್ಞತೆಯ ಆಚರಣೆಗಳನ್ನು ಶವಸಂಸ್ಕಾರ ಪದ್ಧತಿ ಎನ್ನಲಾಗುತ್ತದೆ. ಈ ಸಂಸ್ಕಾರ ಪದ್ಧತಿ ಆಯಾ ಸಂಸ್ಕೃತಿಗಳಿಗೆ ಅನುಗುಣವಾಗಿ ಸಮುದಾಯದಿಂದ ಸಮುದಾಯಕ್ಕೆ ಬದಲಾವಣೆಯಾಗಿರುವುದನ್ನು ಗಮನಿಸಬಹುದಾಗಿದೆ. ತಾವು ನಂಬಿದ ದೈವ, ನಡೆಸಿಕೊಂಡು ಬಂದಿರುವ ಆಚರಣೆ, ಸಂಪ್ರದಾಯಗಳಿಗೆ ಅನುಗುಣವಾಗಿ ಶವಸಂಸ್ಕಾರ ಪದ್ಧತಿಯಲ್ಲೂ ಬದಲಾವಣೆಗಳಾಗಿರುವುದನ್ನು ಕಾಣಬಹುದು. ಪ್ರಸ್ತುತ ಲೇಖನದಲ್ಲಿ ಮುಖ್ಯವಾಗಿ ನಂಜನಗೂಡು ತಾಲೂಕಿನ ಉಪ್ಪಾರ ಸಮುದಾಯದದಲ್ಲಿರುವ ಶವಸಂಸ್ಕಾರ ಪದ್ಧತಿಯ ಬಗ್ಗೆ ತಿಳಿಸುವ ಪ್ರಯತ್ನ ಮಾಡಲಾಗಿದೆ.



***Key Words*** ಉಪ್ಪಾರ, ಜೀವನಾವರ್ತನ ಆಚರಣೆ, ಶವಸಂಸ್ಕಾರ, ನಂಜನಗೂಡು.


**ಪೀಠಿಕೆ**

ಧರೆಯ ಒಡಲಲ್ಲಿ ಜನ್ಮತಾಳಿದ ಪ್ರತಿಯೊಂದು ಜೀವಿಗೂ ಹುಟ್ಟು-ಸಾವುಗಳಿವೆ. ಮಾನವ ಎಷ್ಟೆಲ್ಲಾ ಪ್ರಗತಿ ಸಾಧಿಸಿದರು ಸಾವನ್ನು ಗೆಲ್ಲಲಾರ. ದಾಸರು ಹೇಳಿದಂತೆ 'ಮನುಷ್ಯನ ಜೀವನ ನೀರ ಮೇಲಣ ಗುಳ್ಳೆ' ಎಂಬುದನ್ನು ಅರಗಿಸಿಕೊಳ್ಳಲೇಬೇಕು.'ಜಾತಸ್ಯ ಮರಣಂ ದೃವಂ' ಎಂಬಂತೆ ಹುಟ್ಟಿದ ಮನುಷ್ಯನಿಗೆ ಸಾವು ನಿಶ್ಚಿತವಾಗಿದೆ. ಇದು ದೇವರು ಅಥವಾ ನಿಸರ್ಗ ಕೊಟ್ಟ ಕೊಡುಗೆಯಾಗಿದೆ. "ಮನುಷ್ಯನ ಜೀವನದ ಎರಡು ಪ್ರಮುಖ ಘಟ್ಟಗಳಲ್ಲಿ ಒಂದು ಬದುಕಿಗೆ ನಾಂದಿ ಹಾಡಿದರೆ, ಇನ್ನೊಂದು ಮಂಗಳವನ್ನು ಹಾಡುತ್ತದೆ."[1]

ಮಾನವ ಜೀವಿತ ಕಾಲದ ಆಚರಣೆಗಳಲ್ಲಿ ಕೊರತೆಗಳೇನಾದರೂ ಇರುತ್ತದೆ. ಆದರೆ ಸತ್ತ ವ್ಯಕ್ತಿಗೆ ಸಂಬಂಧಿಸಿದ ಆಚರಣೆಗಳಲ್ಲಿ ಹೆಚ್ಚು-ಕಡಿಮೆಯಾದರೂ ಆತನ ಆತ್ಮ ಇದ್ದವರನ್ನು ಕಾಡುತ್ತದೆಯೆಂಬ ಬಲವಾದ ನಂಬಿಕೆಯಿಂದ ಸಾವಿನ ನಂತರದ ಆಚರಣೆಗಳನ್ನು ಚಾಚುತಪ್ಪದೆ ಆಚರಿಸುವ ಪರಂಪರೆ ಬೆಳೆದುಬಂದಿದೆ. ಈ ಆಚರಣೆಗಳನ್ನು ದೇಹ ಸಂಸ್ಕಾರದ ಆಚರಣೆಗಳು, ಅಂತ್ಯ ಸಂಸ್ಕಾರದ ಆಚರಣೆಗಳೆಂದು ಗುರುತಿಸಿಕೊಳ್ಳಬಹುದು. ಈ ಆಚರಣೆಗಳು ಪ್ರದೇಶದಿಂದ ಪ್ರದೇಶಕ್ಕೆ, ಸಮುದಾಯದಿಂದ ಸಮುದಾಯಕ್ಕೆ ಮತ್ತು ಅವರವರ ನಂಬಿಕೆ, ಆಚಾರ-ವಿಚಾರ, ಆರ್ಥಿಕ ಸ್ಥಿತಿಗತಿಗನುಗುಣವಾಗಿ ವಿಭಿನ್ನವಾಗಿರುವುದನ್ನು ಕಾಣುತ್ತೇವೆ. ಸ್ವರ್ಗ, ನರಕ, ಭೂತ, ಪ್ರೇತ, ಪುನರ್ಜನ್ಮಗಳಲ್ಲಿ ತಮ್ಮದೇ ಆದ ನಂಬಿಕೆಯುಳ್ಳ ಉಪ್ಪಾರರಲ್ಲಿ ಸಾವಿನ ಮತ್ತು ಸಾವಿನ ನಂತರದ ಆಚರಣೆಗಳು ಅವರ ನಂಬಿಕೆಗಳ ಹಿನ್ನೆಲೆಯಲ್ಲಿ ಆಚರಣೆಗೊಳ್ಳುತ್ತವೆ.

ಉಪ್ಪಾರರಲ್ಲಿ ಯಾವುದೇ ವ್ಯಕ್ತಿ ಮೃತನಾದರೆ ತಕ್ಷಣ ಕೈ-ಕಾಲುಗಳನ್ನು ಮಡಚಿ ಮೃತದೇಹವನ್ನು ಮನೆಯ ಹೊರಾಂಗಣ ಅಥವಾ ಪಡಸಾಲೆಗೆ ತಂದು ಮಲಗಿಸುತ್ತಾರೆ. ನಂತರ ಸತ್ತ ಸುದ್ದಿಯನ್ನು ಬಂಧು-ಬಾಂಧವರಿಗೆ ತಿಳಿಸುತ್ತಾರೆ. ಸತ್ತ ವ್ಯಕ್ತಿಯ ತಲೆಯ ಹತ್ತಿರ ದೀಪವನ್ನು ಹಚ್ಚಿಡುತ್ತಾರೆ. ಮನೆಯ ಮುಂದೆ ಕೊಳ್ಳಿ ಹಾಕುತ್ತಾರೆ. ಶವದ ಹಣೆಗೆ ವಿಭೂತಿ, ಕುಂಕುಮ ಇಡುತ್ತಾರೆ. ಸಾವಿನ ಮನೆಗೆ ಸಂಬಂಧಿಕರೆಲ್ಲಾ ಬಂದು ಸೇರುತ್ತಾರೆ. ಹೆಣವನ್ನು ಸುಡುವ ಮತ್ತು ಹೂಳುವ ಎರಡು ಪದ್ಧತಿಗಳು ಉಪ್ಪಾರರಲ್ಲಿದೆ. ವಿಷ ಕುಡಿದವರು, ನೇಣು ಹಾಕಿಕೊಂಡವರು,

[1] ಸಣ್ಣರಾಮ, ಲಂಬಾಣಿ ಸಂಸ್ಕೃತಿ, ಪು.11

ಸೀಮೆ ಎಣ್ಣೆ ಸುರಿದು ಬೆಂಕಿ ಹಚ್ಚಿಕೊಂಡು ಸತ್ತವರು, ಮೈಮೇಲೆ ತೊನ್ನು ಇರುವವರು ಸತ್ತರೆ ಸುಡುವ ಸಂಪ್ರದಾಯ ಉಪ್ಪಾರರಲ್ಲಿದೆ.

ಶವವನ್ನು ಸ್ಮಶಾನಕ್ಕೆ ಸಾಗಿಸುವ ಮೊದಲು ಸ್ನಾನ ಮಾಡಿಸುತ್ತಾರೆ. ಹೊಸ ಹಂಡೆಯನ್ನು ತಂದು ಉತ್ತರ ದಿಕ್ಕಿನಲ್ಲಿ ಮೂರು ದಿಂಡು ಕಲ್ಲಿನ ಒಲೆ ಹೂಡಿ ನೀರು ಕಾಯಿಸಿ, ಶವದ ಹಳೆಬಟ್ಟೆ ತೆಗೆದು ಅರಿಶಿಣ, ಸೀಗೆಪುಡಿ ಹಚ್ಚಿ ಸಾವಿಗೆ ನೆರೆದ ಎಲ್ಲಾ ಸಂಬಂಧಿಕರು ಹಂಡೆಯಲ್ಲಿ ಕಾಯಿಸಿದ ನೀರನ್ನು ಶವದ ಮೇಲೆ ಹಾಕಿ ಸ್ನಾನ ಮಾಡಿಸುತ್ತಾರೆ. ಹೆಣದ ಸ್ನಾನಕ್ಕೆ ಕಾಯಿಸಿದ ನೀರಿನಲ್ಲಿ ಒಂದು ತೊಟ್ಟು ನೀರನ್ನು ಉಳಿಸಬಾರದೆಂಬ ಸಂಪ್ರದಾಯವಿದೆ ಹಾಗೂ ಹೆಣದ ಸ್ನಾನ ಮಾಡಿಸುವಾಗ ಸ್ನಾನದ ನೀರು ಹರಿದು ಹೋಗಬೇಕು. ಆ ಸ್ನಾನದ ನೀರು ಒಂದೆಡೆ ನಿಲ್ಲಬಾರದು ಎಂದು ನಂಬಿಕೆಯಿದೆ. ಶವಕ್ಕೆ ಸ್ನಾನ ಮಾಡಿಸಿ, ಹೊಸ ಬಟ್ಟೆಯನ್ನು ತೊಡಿಸಿ ಪೂರ್ವಾಭಿಮುಖವಾಗಿ ಕೂರಿಸಿ ಹಣ್ಣು-ಕಾಯಿ, ಹೂವು, ಎಲೆ, ಅಡಿಕೆಗಳನ್ನಿಟ್ಟು ಪೂಜೆ ಸಲ್ಲಿಸುತ್ತಾರೆ. ವಿವಾಹವಾಗಿ ಗಂಡ ಮರಣ ಹೊಂದಿದರೆ ಅವನ ಹೆಂಡತಿಗೂ ತವರಿನವರು ಹೊಸ ಸೀರೆಯನ್ನು ತಂದು ಉಡಿಸಿ, ಹೂವು ಮುಡಿಸಿ ಶವದ ಪಕ್ಕದಲ್ಲಿ ಕೂರಿಸಿ ಪೂಜೆ ಮಾಡುತ್ತಾರೆ. ಹಾಗೆಯೇ ವಿವಾಹಿತ ಹೆಣ್ಣು ಮಕ್ಕಳು ಸತ್ತರೂ ತವರಿನವರು ತಂದ ಬಿಳಿ ಬಟ್ಟೆಯನ್ನು ತೊಡಿಸಿ ಪೂಜೆ ಸಲ್ಲಿಸುತ್ತಾರೆ.

ಬಿದಿರಿನ ಬೊಂಬುಗಳಿಂದ ಕುರ್ಜನ್ನು ಸಿದ್ಧಪಡಿಸಿ ಅದಕ್ಕೆ ತೆಂಗಿನ ಗರಿಯನ್ನು ಹೆಣೆದು ಹುಲ್ಲನ್ನು ಹಾಸಿ ಆಸನವನ್ನಾಗಿ ಮಾಡಿ ಕುರ್ಜಿನ ಮೇಲೆ ಗೋಪುರದಾಕಾರವನ್ನು ಮಾಡಿ ಬಾಳೆಕಂದು ಹೂವುಗಳಿಂದ ಅಲಂಕರಿಸುವರು. ಕುರ್ಜಿನ ನಾಲ್ಕು ಕಡೆಯು ಎಳೆನೀರಿನ ಗೊಂಚಲನ್ನು ಕಟ್ಟುವರು. ಅನಂತರ ಅಲಂಕಾರಗೊಳಿಸಿದ ಕುರ್ಜು ಅಥವಾ ಚಟ್ಟದ ಮೇಲೆ ಹೆಣವನ್ನು ಕೂರಿಸುತ್ತಾರೆ. ಹೀಗೆಲ್ಲಾ ಮಾಡಿ ಶವವನ್ನು ಕುರ್ಜಿನ ಮೇಲೆ ಕೂರಿಸಿ ನಾಲ್ಕು ಜನ ಹೊತ್ತುಕೊಂಡು ರಣವಾದ್ಯ ಸಮೇತ ಸ್ಮಶಾನಕ್ಕೆ ಅಥವಾ ತಮ್ಮ ಜಮೀನಿಗೆ ಸಾಗಿಸುತ್ತಾರೆ. ಕುರ್ಜು ಅಥವಾ ಚಟ್ಟಕ್ಕೆ ಮೊದಲು ಮೃತನ/ಳ ಮಕ್ಕಳು ಹೆಗಲು ಕೊಡುತ್ತಾರೆ. ನಂತರ ಬೇರೆಯವರು ಕೊಡುತ್ತಾರೆ. ಶವದ ಮುಂದೆ ಕಿರಿಯ ಮಗನು ತಲೆ ಮೇಲೆ ಬಟ್ಟೆ ಹಾಕಿಕೊಂಡು ಕೊಳ್ಳಿ ಹಿಡಿದು ಶವದ ಮುಂದೆ ಹೋಗುತ್ತಾನೆ. ಹೆಣವು ಬಹುಭಾರವಾಗಿರುವುದರಿಂದ ಹೊತ್ತಿರುವ ನಾಲ್ಕು ಜನರೇ ಸ್ಮಶಾನದವರೆಗೂ ಹೊರಲಾರದೆಂದು ಸ್ಮಶಾನದ ಮಾರ್ಗಮಧ್ಯೆ ಆಗಾಗ ಸಂಬಂಧಿಕರು ಹೆಗಲು ಬದಲಾಯಿಸುತ್ತಾ ಸಾಗುತ್ತಾರೆ. ಶವವನ್ನು ಸಾಗಿಸುವ ಮಾರ್ಗಮಧ್ಯದಲ್ಲಿ ನಿರ್ದಿಷ್ಟ ಸ್ಥಳವೊಂದೆಡೆಯಲ್ಲಿ ಚಟ್ಟ ಅಥವಾ ಕುರ್ಜನ್ನು ಕೆಳಗಿಳಿಸುತ್ತಾರೆ. ಈ ರೀತಿ ಹೆಣವನ್ನು ಇಳಿಸುವ ಸಂಪ್ರದಾಯ ಕಂಡುಬರುತ್ತದೆ. ಹೀಗೆ ಇಳಿಸುವುದರಿಂದ ಸತ್ತ ವ್ಯಕ್ತಿ ಒಂದು ವೇಳೆ ದೆವ್ವವಾದರೆ ಆ ದೆವ್ವದ ದಾರಿ ತಪ್ಪಿಸುವ ಉದ್ದೇಶದಿಂದ ಈ ಪದ್ಧತಿ ಅನುಸರಿಸುತ್ತಾರೆ. ನಂತರ ಶವವನ್ನು ಹೊತ್ತವರು ಹಿಂದು ಮುಂದಾಗಿ ಬದಲಾಯಿಸಿಕೊಳ್ಳುತ್ತಾರೆ. ಅಲ್ಲಿಂದ ಶವವನ್ನು ನೇರವಾಗಿ ಸಂಸ್ಕಾರ ಮಾಡುವ ಸ್ಥಳಕ್ಕೆ ಸಾಗಿಸುತ್ತಾರೆ. ಶವವನ್ನು ಹೊತ್ತೊಯ್ಯುವ ಸಂದರ್ಭದಲ್ಲಿ ಶವದ ಮೇಲೆ ಕಡಲೆ ಪುರಿ ಹಾಗೂ ಚಿಲ್ಲರೆ ಹಣವನ್ನು ತೂರುತ್ತಾರೆ. ಬಹುಶಃ ಬದುಕಿದ್ದಾಗ ಮಾಡಿದ್ದ ಸಾಲವನ್ನು ತೀರಿಸದಿದ್ದ ಪಕ್ಷದಲ್ಲಿ ಋಣಮುಕ್ತನಾಗಲೆಂದು ಶವದ ಮೇಲೆ ಹಣವನ್ನು ತೂರುತ್ತಾರೆ ಮತ್ತು ಶವ ಸ್ಮಶಾನ ಸ್ಥಳ ಮುಟ್ಟುವವರೆಗೂ ರಾಗಿ ಅಥವಾ ಯಾವುದಾದರೊಂದು ಧಾನ್ಯವನ್ನು ದಾರಿಯುದ್ದಕ್ಕೂ ಚೆಲ್ಲುತ್ತಾ ಹೋಗುತ್ತಾರೆ. ಸತ್ತ ವ್ಯಕ್ತಿಯು ಪ್ರೇತನಾಗಿ ವಾಪಸ್ಸು ಮನೆಗೆ ಬರಬಾರದು. ಚೆಲ್ಲಿರುವ ರಾಗಿಯನ್ನು ಆರಿಸಿಕೊಂಡು ಬರುವುದರೊಳಗೆ ಬೆಳಗಾಗುತ್ತದೆ. ಮತ್ತೆ ವಾಪಸ್ಸು ಸ್ಮಶಾನಕ್ಕೆ ಹೋಗುತ್ತಾರೆ ಎಂಬ ನಂಬಿಕೆಯು ಉಪ್ಪಾರರಲ್ಲಿದೆ.

**ಹೂಳುವ ಪದ್ಧತಿ**

ಶವವನ್ನು ಹೂಳುವ ಸ್ಥಳ ಅಥವಾ ಸ್ಮಶಾನವನ್ನು ತಲುಪುವ ಮುಂಚೆಯೇ ಉಚಿತವಾದ ಗುಂಡಿಯನ್ನು ತೋಡಿಸಿ ಹೂಳುವ ವ್ಯವಸ್ಥೆಯಿರುತ್ತದೆ. ಆ ಗುಂಡಿಯು ಆರು ಅಡಿ ಉದ್ದ, ಮೂರು ಅಡಿ ಅಗಲ ಹಾಗೂ ನಾಲ್ಕರಿಂದ ಐದು ಅಡಿ ಆಳದ ಗುಂಡಿಯಾಗಿರುತ್ತದೆ. ಶವ ಸ್ಮಶಾನವನ್ನು ತಲುಪಿದಾಗ ಹೂಳುವ ಜಾಗದ ಸುತ್ತಲೂ ಮೂರು ಸುತ್ತು ಸುತ್ತಿಸಿ ಹೆಣವನ್ನು ಹಿಮ್ಮುಖವಾಗಿ ಕೆಳಗಿಳಿಸಿ ಮತ್ತೊಮ್ಮೆ ಪೂಜೆ ಸಲ್ಲಿಸಿ ಗುಂಡಿಗೆ ಶವವನ್ನು ಇಳಿಸುತ್ತಾರೆ. ಶವವನ್ನು ಹೂಳುವ ಮೊದಲು ಮೃತ ವ್ಯಕ್ತಿಯ ಮುಖವನ್ನು ಕೊನೆಯ ಬಾರಿ ಎಲ್ಲರೂ ನೋಡುತ್ತಾರೆ. ಅವರ ಮೈಮೇಲಿನ ಬಟ್ಟೆಗಳನ್ನು ತೆಗೆಯುತ್ತಾರೆ. ಸೊಂಟಕ್ಕೆ ಕಟ್ಟಿದ ಉಡುದಾರವನ್ನು ಸಹಿತ ತೆಗೆದು ಬೆತ್ತಲೆ ಮಾಡುತ್ತಾರೆ. ಆದ್ದರಿಂದಲೇ 'ಮಾನವ ಬರುವಾಗ ಬೆತ್ತಲೆ ಹೋಗುವಾಗ ಬೆತ್ತಲೆ' ಎಂದು ಹೇಳಿರುವ ಮಾತು ಸತ್ಯವಾಗಿದೆ. ದಕ್ಷಿಣ ದಿಕ್ಕಿಗೆ ತಲೆ ಹಾಕಿ ಹೂಳುತ್ತಾರೆ. ಮೊದಲು ಮನೆಯವರ ಕೈಯಲ್ಲಿ ಮೂರು ಹಿಡಿ ಮಣ್ಣನ್ನು ಹಾಕಿಸುತ್ತಾರೆ. ನಂತರ ನೆರೆದಿದ್ದವರೆಲ್ಲಾ ಮೂರು ಹಿಡಿ ಮಣ್ಣನ್ನು ಹಾಕುತ್ತಾರೆ. ಅ ನಂತರ ಶವದ ಮೇಲೆ ಪೂರ್ಣವಾಗಿ ಮಣ್ಣನ್ನು ಎಳೆದು ಸಮ ಮಾಡಿ ಸಮಾಧಿ ಕಟ್ಟುತ್ತಾರೆ. ಮೃತ ವ್ಯಕ್ತಿಯ ಹೆಂಡತಿಯ ಕೈ ಬಳೆಗಳು, ಹೂವನ್ನು ತೆಗೆಸಿ ಸಮಾಧಿ ಮೇಲೆ ಹಾಕುತ್ತಾರೆ ಹಾಗೂ ಚಟ್ಟವನ್ನು ಕಡಿದು ಬೋರಲು ಹಾಕುತ್ತಾರೆ. ಶವಸಂಸ್ಕಾರ ಕ್ರಿಯೆ ಅಂತ್ಯಗೊಂಡ ಮೇಲೆ ಎಲ್ಲರೂ ಅಲ್ಲಿಂದ ಹಿಂದಿರುಗುತ್ತಾರೆ. ಬರುವಾಗ ಎಲ್ಲಾರು ಕೈ ಕಾಲು ಮುಖ ತೊಳೆದುಕೊಂಡು ಎಲೆ-ಅಡಿಕೆ ಜಗಿದು ಅಲ್ಲೇ ಉಗಿದು ಬರುತ್ತಾರೆ. ಮೃತ ವ್ಯಕ್ತಿಯ ಮನೆಗೆ ಬಂದು ದೀಪ ನೋಡಿ ಕೈ ಮುಗಿದು, ಹುಣಸೆಹುಳಿ ಮುಟ್ಟಿ ಸ್ವಲ್ಪ ಹೊತ್ತು ಅಲ್ಲೇ ಕುಳಿತು ನಂತರ ತಮ್ಮ ತಮ್ಮ ಮನೆಗಳಿಗೆ ತೆರಳಿ ಸ್ನಾನ ಮಾಡಿ ಶವ ಸಂಸ್ಕಾರದ ಮೈಲಿಗೆಯನ್ನು ಕಳೆದುಕೊಳ್ಳುತ್ತಾರೆ.

**ಸುಡುವ ಪದ್ಧತಿ**

ಶವವನ್ನು ಸುಡುವ ಪದ್ಧತಿಯಲ್ಲಿ ಚಿತೆಯ ಹತ್ತಿರ ಹೋದ ತಕ್ಷಣ ಚಿತೆಯ ಸುತ್ತಲೂ ಶವ ಹೊತ್ತವರು, ಕೊಳ್ಳಿ ಹಿಡಿದವರು

ಮೂರು ಬಾರಿ ಪ್ರದಕ್ಷಿಣೆ ಹಾಕುತ್ತಾರೆ. ಚಟ್ಟವನ್ನು ಇಳಿಸಿ ಶವಕ್ಕೆ ಪೂಜೆ ಸಲ್ಲಿಸಿ, ಶವವನ್ನು ಚಿತೆಯ ಮೇಲೆ ಮಲಗಿಸಿ ಒಬ್ಬೊಬ್ಬರಾಗಿ ಸೌದೆ ತುಂಡುಗಳನ್ನು ಇಡುವರು ಹಾಗೂ ಸಂಸ್ಕಾರಕ್ಕೆ ಬಂದವರೆಲ್ಲಾ ಎರಡೆರಡು ಸೌದೆ ಕಡ್ಡಿಗಳನ್ನಾದರೂ ಚಿತೆಗೆ ಹಾಕಿಯೇ ಹೋಗಬೇಕೆಂಬ ಪದ್ಧತಿಯಿದೆ. ನಂತರ ಹಿರಿಯ ಮಗ ಕೊಳ್ಳಿ ಹಿಡಿದು ಚಿತೆಯ ಸುತ್ತ ಮೂರು ಬಾರಿ ಪ್ರದಕ್ಷಿಣೆ ಹಾಕುತ್ತಾನೆ. ನಂತರ ಚಿತೆಗೆ ಮೂರು ಕಡೆ ಬೆಂಕಿಯಿಡುತ್ತಾರೆ. ಅಂದರೆ ಮೊದಲು ಶವದ ತಲೆಯ ಭಾಗಕ್ಕೆ ನಂತರ ಮಧ್ಯಭಾಗ, ಕೊನೆಗೆ ಕಾಲಿನ ಭಾಗಕ್ಕೆ ಬೆಂಕಿ ಇಡುತ್ತಾರೆ. ಬೆಂಕಿ ಹತ್ತಿದ ಮೇಲೆ ಎಲ್ಲರೂ ಹಿಂತಿರುಗಿ ನೋಡದೆ ಮನೆಗೆ ಬರುತ್ತಾರೆ. ಕೆಲವರು ಅಲ್ಲಿಯೇ ಇದ್ದು ಶವವು ಅರೆಬರೆ ಬೇಯಬಾರದು ಎಂಬ ಕಾರಣಕ್ಕೆ ಸೌದೆಯನ್ನು, ಬೆಂಕಿಯನ್ನು ಕೆದಕಿ ಶವವು ಸಂಪೂರ್ಣವಾಗಿ ಬೆಂದ ನಂತರವೇ ಮನೆಗೆ ಹಿಂದಿರುಗುತ್ತಾರೆ. ಅಂದು ಸತ್ತ ವ್ಯಕ್ತಿಯ ಮನೆಯಲ್ಲಿ ಒಲೆ ಹಚ್ಚುವುದಿಲ್ಲ. ಅಕ್ಕಪಕ್ಕದ ಮನೆಯವರು, ಸಂಬಂಧಿಕರು, ದಾಯಾದಿಗಳು ಸಾವಿನ ಮನೆಯವರಿಗೆ ಊಟ, ತಿಂಡಿ, ಕಾಫಿ, ಟೀಗಳನ್ನು ತಂದು ಕೊಡುತ್ತಾರೆ.ಈ ಆಚರಣೆಯು ಹನ್ನೊಂದು ದಿನಗಳವರೆಗೆ ನಡೆಯುತ್ತದೆ.

**ಶಿಶುಗಳ ಶವಸಂಸ್ಕಾರ**

ಹುಟ್ಟಿದ ಮಕ್ಕಳು ಹಾಗೂ ವರ್ಷ ತುಂಬುವುದರೊಳಗೆ ಸತ್ತ ಶಿಶುಗಳನ್ನು ಬಿಳಿಯ ಬಟ್ಟೆಯಿಂದ ಸುತ್ತಿ ಯಾರಾದರೊಬ್ಬರೂ ತಮ್ಮ ಎರಡು ತೋಳುಗಳ ಮೇಲೆ ಆ ಮಗುವಿನ ಶವವನ್ನು ಮಲಗಿಸಿಕೊಂಡು ಸ್ಮಶಾನಕ್ಕೆ ತೆಗೆದುಕೊಂಡು ಹೋಗುತ್ತಾರೆ. ಇಂತಹ ಮಕ್ಕಳ ಶವಗಳನ್ನು ಹುತ್ತದ ಪಕ್ಕದಲ್ಲಿ ಹಳ್ಳ ತೆಗೆದು ನೆಲಕ್ಕೆ ಬಾಳೆ ಎಲೆ ಹಾಸಿ, ಅದರ ಮೇಲೆ ಮಗುವಿನ ಶವವನ್ನು ಮಲಗಿಸಿ ಎಲ್ಲಾ ಪೂಜಾ ಕಾರ್ಯಗಳನ್ನು ಮುಗಿಸಿ ಮಣ್ಣು ಮುಚ್ಚಿ ಸಂಸ್ಕಾರ ಮಾಡುತ್ತಾರೆ. ಈ ರೀತಿ "ಹುತ್ತದ ಬಳಿಯಲ್ಲಿ ಹೂಳಿದ ಅದೇ ಕಂದಮ್ಮಗಳು ಮತ್ತೆ ಆರು ತಿಂಗಳ ಒಳಗೆ ಅದೇ ತಾಯಿಯ ಹೊಟ್ಟೆಯಲ್ಲಿ ಮರುಹುಟ್ಟು ಪಡೆಯುತ್ತವೆ ಎಂಬ ನಂಬಿಕೆ ಉಪ್ಪಾರರಲ್ಲಿದೆ."[2] ಹಾಗಾಗಿ ಇವರಲ್ಲಿ 'ಹುತ್ತದ ಮಕ್ಕಳು ಆರು ತಿಂಗಳಲ್ಲಿ ಮಡಿಲಿಗೆ' ಎಂಬ ಮಾತಿದೆ.

ಹೀಗೆ ಯಾವುದೇ ರೀತಿಯ ಸಾವು ಸಂಭವಿಸಿದರು ವ್ಯಕ್ತಿಯು ಸತ್ತ ದಿನದಿಂದ ಮನೆಯ ಜಗುಲಿಯ ಮೇಲೆ ಸೂತಕ ಕಳೆಯುವವರೆಗೂ ಪ್ರತಿ ರಾತ್ರಿ ದೀಪ ಹಚ್ಚಿಡಬೇಕು.ಸಾವಿಗೆ ಎಲ್ಲರೂ ಹೋಗಬೇಕು. ಅದೊಂದು ಪುಣ್ಯದ ಕೆಲಸವೆಂದು ಸಾಮಾಜಿಕ ಬಂಧಕ್ಕೆ ರೂಪಿಸಿಕೊಂಡವರು. ಸಾವು ಸಂಭವಿಸಿರುವುದೆಂದು ತಿಳಿದ ತಕ್ಷಣ ಕರೆಯದಿದ್ದರು ಹೋಗಬೇಕೆಂಬುದು ಮೃತನಿಗೆ ನೀಡುವ ಗೌರವವಾಗಿದೆ. ಎಂತಹ ಶತೃತ್ವವೇ ಇದ್ದರು ಸಹ ಸತ್ತಾಗ ಹೋಗಿ ಬರುತ್ತಾರೆ.

ಉಪ್ಪಾರರಲ್ಲಿ ಉತ್ತರ ಕ್ರಿಯೆಯು ಎರಡು ಹಂತಗಳಲ್ಲಿ ನಡೆಯುತ್ತದೆ. ಶವಸಂಸ್ಕಾರವಾದ ಮೂರನೆಯ ದಿನಕ್ಕೆ ಹಾಲು–ತುಪ್ಪ ಅಥವಾ ಮೂರು ಕೂಳು ಹಾಕುವುದು, ವ್ಯಕ್ತಿ ಸತ್ತ ಹನ್ನೊಂದನೆಯ ದಿನಕ್ಕೆ ವೈಕುಂಠ ಸಮಾರಾಧನೆ ಅಥವಾ ತಿಥಿ ಕಾರ್ಯವನ್ನು ನಡೆಸುವ ಪದ್ಧತಿಯಿದೆ.

**ಹಾಲು ತುಪ್ಪ ಕಾರ್ಯ**

ಮೂರನೇ ದಿವಸದಂದು ಹಾಲು–ತುಪ್ಪ ಹಾಕುವ ಕಾರ್ಯವು ಬಹಳ ಸರಳವಾಗಿ ನಡೆಯುತ್ತದೆ. ಮೃತ ವ್ಯಕ್ತಿಯ ಮನೆಯವರು, ಸಂಬಂಧಿಕರು, ಅಕ್ಕ–ಪಕ್ಕದ ಮನೆಯವರೆಲ್ಲರೂ ಹಾಲು–ತುಪ್ಪ, ಕಡಲೆಪುರಿ, ಬಾಳೆಎಲೆ, ಪೂಜಾ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗುತ್ತಾರೆ. ಸಮಾಧಿ ಮೇಲೆ ಒಂದು ಬಾಳೆ ಎಲೆಯನ್ನು ಹಾಸಿ ಅದರ ಮೇಲೆ ಹಾಲು–ತುಪ್ಪ ಬಿಟ್ಟು, ಕಡಲೆಪುರಿಯನ್ನು ಹಾಕಿ ಗಂಧದ ಕಡ್ಡಿ ಕರ್ಪೂರ ಹಚ್ಚಿ ತೆಂಗಿನಕಾಯಿ, ಬಾಳೆಹಣ್ಣು ಇಟ್ಟು, ಸಾಂಬ್ರಾಣಿ ಹಾಕಿ ಮನೆಯ ಹಿರಿಯ ಮಗನಿಂದ ಪೂಜೆ ಸಲ್ಲಿಸುತ್ತಾರೆ. ಸತ್ತ ವ್ಯಕ್ತಿಯ ಆತ್ಮವನ್ನು ಆಹಾರ ಸ್ವೀಕರಿಸುವಂತೆ ಆಹ್ವಾನಿಸುತ್ತಾರೆ. ಆಗ ಸತ್ತ ವ್ಯಕ್ತಿಯುಕಾಗೆಗಳ ರೂಪದಲ್ಲಿ ಬಂದು ಆಹಾರ ಸ್ವೀಕರಿಸುತ್ತಾನೆ ಹಾಗೂ ಆತನ ಆತ್ಮವು ತೃಪ್ತಿಪಡುತ್ತದೆ ಎಂಬ ನಂಬಿಕೆಯಿದೆ.

ಶವಕ್ಕೆ ಅಗ್ನಿ ಸಂಸ್ಕಾರ ಮಾಡಿದ್ದರೆ ಮೂರನೇ ದಿನದ ಕಾರ್ಯಕ್ಕೂ ಮೊದಲು ಸುಟ್ಟ ಬೂದಿಯನ್ನು ನೀರಿನಲ್ಲಿ ಬಿಡಲಾಗುತ್ತದೆ.ಈ ರೀತಿ ಮಾಡುವುದರಿಂದ ಆತ್ಮ ಪಂಚಭೂತಗಳಲ್ಲಿ ಬೆರೆಯುತ್ತದೆ. ಅಂದರೆ ಭೂಮಿ, ಅಗ್ನಿ, ವಾಯು, ಆಕಾಶ ಹಾಗೂ ನೀರು ಇದರಲ್ಲಿ ಆತ್ಮ ವಿಲೀನವಾದರೆ ಮಾತ್ರ ಆ ಆತ್ಮಕ್ಕೆ ಸದ್ಗತಿ ದೊರೆಯುತ್ತದೆ. ಇದರಿಂದ ಆತ್ಮಕ್ಕೆ ವಿಮುಕ್ತಿ ದೊರಕಿ ಇನ್ನೊಂದು ದೇಹದಲ್ಲಿ ಸೇರುತ್ತದೆ.ಒಟ್ಟಿನಲ್ಲಿ ಆತ್ಮವು ಜೀವನದ ನಿರಾಕಾರ ಚೈತನ್ಯವೆಂದು ಪರಿಗಣಿಸಲ್ಪಡುತ್ತದೆ. ಆತ್ಮವು ಚಿರಂತನವೆಂದು ನಂಬಿಕೆಯಾಗಿದೆ.

**ತಿಥಿ ಅಥವಾ ಹನ್ನೊಂದನೆ ದಿನದ ಕಾರ್ಯ**

ಸತ್ತವರ ಆತ್ಮಕ್ಕೆ ಶಾಂತಿ ಸಿಗಲೆಂದು ಉತ್ತರ ಕ್ರಿಯೆಗಳನ್ನು ಮಾಡುತ್ತಾರೆ. ಸತ್ತ ಕ್ಷಣದಿಂದ ಸತ್ತವನ ಆತ್ಮವನ್ನು ಪೂರ್ವಜರ ಆತ್ಮಗಳೊಂದಿಗೆ ಸೇರಿಸುವವರೆಗೆ ಹಲವಾರು ಆಚರಣೆಗಳನ್ನು ನಡೆಸುತ್ತಾರೆ. ಅವುಗಳಲ್ಲಿ ತಿಥಿ ಕಾರ್ಯವು ಪ್ರಧಾನವಾದ ಆಚರಣೆಯಾಗಿರುತ್ತದೆ. ತಿಥಿಯನ್ನು ಪ್ರಸ್ತುತ ದಿನಗಳಲ್ಲಿ ಕೈಲಾಸ ಸಮಾರಾಧನೆ ಎಂತಲೂ ಕರೆಯುತ್ತಾರೆ. ಈ ಕಾರ್ಯವನ್ನು ಹನ್ನೊಂದನೆ ದಿನಕ್ಕೆ ಮಾಡಿ ಮುಗಿಸುತ್ತಾರೆ. ಅಂದು ನೆಂಟರಿಷ್ಟರಿಗೆಲ್ಲಾ ಕರೆ ಕಳುಹಿಸುತ್ತಾರೆ. ಮನೆಮಂದಿಯೆಲ್ಲಾ ಹನ್ನೊಂದನೆಯ ದಿವಸ ಗೋಮೂತ್ರ ಮತ್ತು ಸೀಗೆಕಾಯಿ ಬಳಸಿ ಸ್ನಾನ ಮಾಡಿ ಮಡಿಗೊಂಡು ಸೂತಕವನ್ನು ಕಳೆದು ಕೊಳ್ಳುತ್ತಾರೆ. ಮನೆಮಗನು ತಲೆಬೋಳಿಸಿಕೊಂಡು ಮಡಿಗೊಂಡು ಸೋದರ ಮಾವ ತಂದ ಹೊಸ ಬಿಳಿಬಟ್ಟೆಗಳನ್ನು ಧರಿಸಿ ಪೂಜೆ–ಪುನಸ್ಕಾರಗಳನ್ನು ನೆರವೇರಿಸಿ ಪ್ರೇತಾತ್ಮಕ್ಕೆ ತೃಪ್ತಿ ತರುತ್ತಾನೆ.

[2].ವಕ್ತೃ: ಮಹದೇವಮ್ಮ, ವಯಸ್ಸು–65, ಕೂಲಿ, ಬಿಳುಗಲಿ.

ಅಂದು ಮನೆಯಲ್ಲಿ ಮರಣ ಹೊಂದಿದ ವ್ಯಕ್ತಿ ತಿನ್ನುತ್ತಿದ್ದಂತಹ ತಿಂಡಿಗಳನ್ನು ತಯಾರಿಸುತ್ತಾರೆ ಮತ್ತು ಪೇಟೆಯಿಂದಲೂ ಕೊಂಡು ತರುತ್ತಾರೆ. ಮಾಂಸದ ಅಡುಗೆಗಳನ್ನು ತಯಾರಿಸುತ್ತಾರೆ. ಒಂದು ಮಡಿಕೆಯಲ್ಲಿ ಒಂದು ಪಾವು ಅಕ್ಕಿ, ಅಗಸೆಸೊಪ್ಪು, ನುಗ್ಗೆ ಸೊಪ್ಪು ಐದು ತರಹದ ಕಾಳುಗಳನ್ನು ಮಿಶ್ರಣ ಮಾಡಿ ಹಿಂಡಕೂಳನ್ನು ಮನೆಯಲ್ಲಿ ಬೇಯಿಸುತ್ತಾರೆ. ಮನೆಯಲ್ಲಿ ಸತ್ತ ವ್ಯಕ್ತಿಯ ಆತ್ಮವನ್ನು ಒಂದು ಕೋಣೆಯಲ್ಲಿ ಕಳಸವಿಟ್ಟು, ಕಳಸದ ಮುಂದೆ ಅಲ್ಲಿಗೆ ಆಹ್ವಾನಿಸುತ್ತಾರೆ. ದೊಡ್ಡ ಬಾಳೆಎಲೆಯನ್ನು ಹಾಸಿ ಅದರ ಮೇಲೆ ತಯಾರಿಸಿದ ಎಲ್ಲಾ ತಿಂಡಿ ಪದಾರ್ಥಗಳನ್ನು ಹರಡುತ್ತಾರೆ. ಸತ್ತವರಿಗೆ ಇಷ್ಟವಾದ ಎಲ್ಲಾ ಬಗೆಯ ತಿನಿಸುಗಳು ಅಲ್ಲಿರುತ್ತವೆ. ಜೊತೆಗೆ ಮಾಂಸದ ಅಡುಗೆಯನ್ನು ಎಡೆಗೆ ಹಾಕುತ್ತಾರೆ. ಹೀಗೆ ಎಡೆಯಿಟ್ಟ ಮೇಲೆ ಮನೆಯವರೆಲ್ಲಾ ಕಳಸದ ಮುಂದೆ ಪೂಜೆ ಮಾಡಿ ಧೂಪ ಹಾಕುತ್ತಾರೆ. ನಂತರ ನೆಂಟರಿಷ್ಟರೆಲ್ಲಾ ಒಬ್ಬೊಬ್ಬರಾಗಿ ಕಳಸದ ಮುಂದೆ ನಿಂತು ನಮಸ್ಕಾರ ಮಾಡುತ್ತಾರೆ. ಎಲ್ಲಾ ತಿಂಡಿ ತಿನಿಸುಗಳನ್ನು ಒಂದು ಮೊರದಲ್ಲಿ ಹಾಕಿ ಮನೆಯ ಮೇಲೆ ಇಡುತ್ತಾರೆ ಮತ್ತು ಮನೆಯ ಬಾಗಿಲನ್ನು ಮುಚ್ಚುವುದಿಲ್ಲ.

ಪ್ರತಿಯೊಂದು ಪೂಜೆ-ಪುನಸ್ಕಾರಗಳು ಮುಗಿದ ಮೇಲೆ ಮೃತನ ಮನೆಯವರು, ಸಂಬಂಧಿಕರು, ಅಕ್ಕಪಕ್ಕದ ಮನೆಯವರು ಪೂಜಾ ಸಾಮಗ್ರಿಗಳು, ಮೃತ ವ್ಯಕ್ತಿ ತಿನ್ನುತ್ತಿದ್ದಂತಹ ಎಲ್ಲಾ ಬಗೆಯ ತಿಂಡಿ-ತಿನಿಸುಗಳು, ಮಾಂಸಾಹಾರದ ಅಡುಗೆಗಳು, ಬೀಡಿ, ಸಿಗರೇಟು, ಮದ್ಯ ಮುಂತಾದವುಗಳನ್ನು ಒಂದು ದೊಡ್ಡ ಪುಟ್ಟಿಯಲ್ಲಿ ತೆಗೆದುಕೊಂಡು ಸಮಾಧಿ ಬಳಿಗೆ ಹೋಗುತ್ತಾರೆ ಹಾಗೂ ತಲೆ ಬೋಳಿಸಿಕೊಂಡ ಹಿರಿ ಮಗನು ಮಡಿಕೆಯಲ್ಲಿ ಬೇಯಿಸಿದ ಹಿಂಡಕೂಳನ್ನು ಹೆಗಲಲ್ಲಿ ಹೊತ್ತು ಮುಂದೆ ನಡೆಯುತ್ತಾನೆ. ಅಂತ್ಯಸಂಸ್ಕಾರದ ಸ್ಥಳಕ್ಕೆ ಹೋದ ಬಳಿಕ ಸಮಾಧಿಯನ್ನು ಹಸನುಗೊಳಿಸಿ ಬಾಳೆಎಲೆ ಹಾಸಿ ತಂದಂತಹ ಎಲ್ಲಾ ತಿಂಡಿ ಸಾಮಾನುಗಳನ್ನು ಎಡೆಹಾಕಿ, ಹಿಂಡಕೂಳನ್ನು ಹಾಕಿ, ತೆಂಗಿನಕಾಯಿ ಒಡೆದು, ಬಾಳೆಹಣ್ಣು ಮುರಿದು, ಅರಿಶಿನ-ಕುಂಕುಮ ಹಾಕಿ, ಗಂಧದ ಕಡ್ಡಿ, ಕರ್ಪೂರ ಹಚ್ಚಿ, ಧೂಪ, ಸಾಮ್ರಾಣಿ ಹಾಕಿ ಹಿರಿಮಗನು ಪೂಜೆ ಸಲ್ಲಿಸುತ್ತಾನೆ. ನಂತರ ಮನೆಯವರು, ಸಂಬಂಧಿಕರು ಪೂಜೆ ಸಲ್ಲಿಸಿ ಕೈ ಮುಗಿದು ಹಿಂದೆ ಸರಿಯುತ್ತಾರೆ. ಕಾಗೆಗಳು ಬಂದು ತಿಂಡಿ-ತಿನಿಸುಗಳನ್ನು ಮುಟ್ಟಿದ ಬಳಿಕ ಆತನ ಆತ್ಮವು ತೃಪ್ತಿ ಪಡುತ್ತದೆ ಮತ್ತು ಸ್ವರ್ಗಕ್ಕೆ ಸೇರಿದ್ದಾನೆ ಎಂಬ ವಾಡಿಕೆಯಿದೆ. ಅನಂತರ ಸಮಾಧಿ ಮೇಲೆ ಎಡೆಹಾಕಿದ ತಿಂಡಿತಿನಿಸುಗಳನ್ನು ಎಲ್ಲರು ತೆಗೆದುಕೊಂಡು ಪ್ರಸಾದವೆಂದು ಸ್ವೀಕರಿಸುತ್ತಾರೆ. ಎಡೆಯಲ್ಲಿನ ತಿಂಡಿ-ತಿನಿಸುಗಳನ್ನು ತಿನ್ನುವುದರಿಂದ ಅವರಿಗೆ ಯಾವುದೇ ರೀತಿಯ ಗಾಳಿಸೋಂಕು, ಪೀಡೆ, ಪಿಶಾಚಿಗಳ ಕಾಟವು ತಗಲುವುದಿಲ್ಲ ಎಂಬ ನಂಬಿಕೆ ಉಪ್ಪಾರರಲ್ಲಿದೆ. ಮೃತನ ಪತ್ನಿಗೆ ಸಮಾಧಿಯ ಬಳಿಯೇ ಹೂವು, ಕೈ ಬಳೆ, ಅರಿಶಿಣ-ಕುಂಕುಮ, ತಾಳಿಯನ್ನು ತೆಗೆಸಿ ಮುಖ ತೊಳೆಸಿ ಮನೆಗೆ ಹಿಂದಿರುಗುತ್ತಾರೆ. ನಂತರ ಬಂದವರಿಗೆಲ್ಲಾ ಆ ದಿನ ಮಾಡಿದ ಅಡಿಗೆ ಮಾಡಿ ಉಣಬಡಿಸುತ್ತಾರೆ. ಇವರು ತಿಥಿಗೆ ಸಿಹಿಯಡುಗೆ ಅಥವಾ ಮಾಂಸದಡುಗೆಗಳೆರಡನ್ನೂ ಮಾಡುತ್ತಾರೆ.

**ಸ್ವರ್ಗದ ಬಾಗಿಲು ತೆಗೆಸುವುದು**

ಮೃತನ ಸಮಾಧಿಯಲ್ಲಿ ಎಡೆಯಿಟ್ಟು ಹಿಂದಿರುಗಿ ಬರುವಾಗ ಈ ಒಂದು ವಿಶೇಷ ರೀತಿಯ ಆಚರಣೆ ಮಾಡುತ್ತಾರೆ. ಅದನ್ನು ಸ್ವರ್ಗದ ಬಾಗಿಲು ತೆಗೆಸುವುದು ಅಥವಾ ಸ್ವರ್ಗಕ್ಕೆ ಕಳುಹಿಸುವುದು ಎಂಬ ಪದ್ಧತಿಯನ್ನು ನಡೆಸುತ್ತಾರೆ."ಬಸದಿ ಅಥವಾ ದೇವಸ್ಥಾನವೊಂದರ ಬಳಿಗೆ ಹೋಗಿ ಪೂಜೆ ಸಲ್ಲಿಸಿ, ಅದರ ಬಾಗಿಲಿನಲ್ಲಿ ಮೃತ ವ್ಯಕ್ತಿಯ ಹಿರಿಮಗ ಹಿಂದು-ಮುಂದಾಗಿ ತಿರುಗಿ ನಿಂತು, ಮೂರು ಬೆಣ್ಣೆಯ ಉಂಡೆಗಳನ್ನು ಮಾಡಿಕೊಂಡು ದೇವಾಲಯದ ಬಾಗಿಲಿಗೆ ಎಸೆಯುತ್ತಾರೆ ಹಾಗೂ ಎಸೆಯುವಾಗ 'ಸತ್ತವನನ್ನು ಸ್ವರ್ಗಕ್ಕೆ ಸೇರಿಸು ದೇವರೇ' ಎಂದು ಪ್ರಾರ್ಥಿಸಿಕೊಳ್ಳುತ್ತಾರೆ."[3]

**ಹೆಗಲು ತೊಳೆಯುವುದು**

ಹನ್ನೊಂದನೆಯ ದಿನವು ಶವ ಹೊತ್ತವರನ್ನು ಮನೆಗೆ ಬರಮಾಡಿಕೊಂಡು ಅವರನ್ನು ಸಾಲಾಗಿ ನಿಲ್ಲಿಸಿ ಒನಕೆ ಮೇಲೆ ಕೈಯಿರಿಸಿ ಅನುಭವಸ್ಥರು ಅವರ ಹೆಗಲಿಗೆ ಮೂರು ಬಾರಿ ಹಾಲನ್ನು ಗರಿಕೆಯಿಂದ 'ಸತ್ತ ವ್ಯಕ್ತಿ ಸ್ವರ್ಗಕ್ಕೆ ಸೇರಲಿ' ಎಂದು ಹೇಳುತ್ತಾ ಸವರುತ್ತಾರೆ. ಹೀಗೆ ಒಬ್ಬರಾದ ಮೇಲೆ ಒಬ್ಬರಿಗೆ ನೆರವೇರಿಸಿ ನೀರಿನಿಂದ ಹೆಗಲು ತೊಳೆಯುತ್ತಾರೆ.[4]

**ಸೂತಕ ಕಳೆಯುವುದು**

ವ್ಯಕ್ತಿ ಮರಣ ಹೊಂದಿದ ದಿನದಿಂದ ತಿಥಿ ಕಾರ್ಯವನ್ನು ಮಾಡುವವರೆಗೂ ಸೂತಕವನ್ನು ಆಚರಿಸುತ್ತಾರೆ. ಇವರಲ್ಲಿ ಮೃತಪಟ್ಟ ವ್ಯಕ್ತಿಯ ದಾಯಾದಿಗಳಿಗೂ ಸೂತಕವಿರುತ್ತದೆ. ತಿಥಿಯನ್ನು ಆಚರಿಸುವುದರೊಂದಿಗೆ ಸೂತಕವು ಅಂತ್ಯಗೊಳ್ಳುತ್ತದೆ. ಸೂತಕದ ಮನೆಯವರು ಯಾರ ಮನೆಗೂ ಹೋಗಬಾರದೆಂಬ ನಿಯಮವಿದೆ ಮತ್ತು ಯಾವುದೇ ಶುಭ ಸಮಾರಂಭಗಳಿಗೆ ಭಾಗವಹಿಸುವಂತಿಲ್ಲ. ಮನೆಯ ದುಂಬು ಧೂಳುಗಳನ್ನು ತೆಗೆದು, ಬಟ್ಟೆಗಳನ್ನು ಪಾತ್ರೆ-ಪಗಡೆಗಳನ್ನು ತೊಳೆದು, ಮನೆಗೆ ಸುಣ್ಣ-ಬಣ್ಣಗಳನ್ನು ಬಳಿದು, ಗೋಮೂತ್ರವನ್ನು ಮನೆಗೆಲ್ಲಾ ಸಿಂಪಡಿಸಿ ಸ್ವಚ್ಛಗೊಳಿಸಿ ಸೂತಕವನ್ನು ಕಳೆಯುತ್ತಾರೆ.[5]

ಈ ಮಾನವ ದೇಹ ಪಂಚಭೂತಗಳಿಂದ ನಿರ್ಮಾಣವಾದದ್ದು. ವ್ಯಕ್ತಿ ಮರಣವನ್ನೊಂದಿದ ನಂತರ ದೇಹಕ್ಕೆ ಸಂಸ್ಕಾರ ಮಾಡುವುದು. ನಂತರ ಆತನ ಆತ್ಮವು ಮರಗಿಡಗಳಲ್ಲೋ, ಸ್ಮಶಾನಗಳಲ್ಲೋ ಇರುತ್ತದೆ ಎಂಬ ನಂಬಿಕೆಯಿದೆ.ಆ ಆತ್ಮಕ್ಕೆ ಶಾಸ್ತ್ರೋಕ್ತವಾದ ರೀತಿಯಲ್ಲಿ ಸಂಸ್ಕಾರ ಮಾಡಿದರೆ ಮಾತ್ರ ಪೂರ್ವಿಕರನ್ನು ಸೇರುತ್ತದೆ, ಇಲ್ಲದಿದ್ದರೆ ಆ

[3].ವಕ್ತೃ: ಮಾದಶೆಟ್ಟಿ, ವಯಸ್ಸು-85, ಗಾರೆಕೆಲಸ, ಬಿಳುಗಲಿ.
[4].ವಕ್ತೃ: ತಮ್ಮಯ್ಯಶೆಟ್ಟಿ, ವಯಸ್ಸು-85, ದಿನಸಿಅಂಗಡಿ, ಕರಳಪುರ.
[5]. ವಕ್ತೃ: ಸಾಕಮ್ಮ, ವಯಸ್ಸು-70, ಕೂಲಿ, ಕರಳಪುರ.

ಆತ್ಮವು ದೆವ್ವ, ಭೂತ ಪ್ರೇತವಾಗಿ ಕಾಡುತ್ತದೆಂಬ ಬಲವಾದ ನಂಬಿಕೆ ಸಾಧಾರಣವಾಗಿರುವುದನ್ನು ಕಾಣಬಹುದು.

**ಉಪಸಂಹಾರ**

ಭೂಮಿಯ ಮೇಲೆ ಜನ್ಮ ತಾಳಿರುವ ಪ್ರತಿಯೊಂದು ಜೀವಿಗೆ ಸಾವು ಅನಿವಾರ್ಯ. ಇದು ಸೃಷ್ಟಿಯ ನಿಯಮ. ಸಾವಿನಾಚೆಯ ಬದುಕನ್ನು ಕುರಿತು ಹಿಂದಿನಿಂದಲೂ ಜಿಜ್ಞಾಸೆ ನಡೆದರೆ ಸಾವು ಎಂದಾಗ ಅದು ಭೌತಿಕ ಶರೀರಕ್ಕೆ ಅನ್ವಯಿಸುವಂತದ್ದೆ? ಆತ್ಮಕ್ಕೆ ಸಾವಿಲ್ಲವೇ? ಹಾಗಾದರೆ ವ್ಯಕ್ತಿಯ ಆತ್ಮದ ಅಸ್ತಿತ್ವವೇನು? ಪುನರ್ಜನ್ಮ ಉಂಟೆ? ಮುಂತಾದ ವಿಚಾರಗಳನ್ನು ಕುರಿತು ಚರ್ಚೆ ನಡೆಯುತ್ತಲೇ ಬಂದಿದೆ ಎಂಬ ಉಲ್ಲೇಖ ದಾಖಲಾರ್ಹವಾದದ್ದು. ಹುಟ್ಟು–ಸಾವುಗಳು ಮಾನವ ಜೀವನದ ಪ್ರಮುಖ ಸೋಪಾನಗಳು. ಅವನು ಸತ್ತ ನಂತರ ಪ್ರೇತವಾಗುಳಿಯುತ್ತಾನೆ ಅಥವಾ ಮತ್ತೆ ಹುಟ್ಟಿ ಬರುತ್ತಾನೆ. ಇಲ್ಲವೇ ಸ್ವರ್ಗದಲ್ಲಿದ್ದುಕೊಂಡು ನೆರೆಯವರ ಯೋಗಕ್ಷೇಮಗಳನ್ನು ವಿಚಾರಿಸಿಕೊಳ್ಳುತ್ತಾನೆ ಎಂಬ ನಂಬಿಕೆ ಅನೇಕ ಮರಣೋತ್ತರ ಸಂಸ್ಕಾರಗಳಿಗೆ ಪ್ರೇರಕವಾಗಿವೆ ಎಂಬುದು ಎಲ್ಲಾ ರೀತಿಯ ಮರಣ ಸಂಸ್ಕಾರಗಳಿಗೂ ಹಿನ್ನೆಲೆಯಾಗಿ ಕಂಡುಬರುತ್ತದೆ.

**ಪರಾಮರ್ಶನ ಗ್ರಂಥಗಳು**


- ಅರವಿಂದ ಮಾಲಗತ್ತಿ. (2006). *ಕನ್ನಡ ವಿಷಯ ವಿಶ್ವಕೋಶ ಜಾನಪದ.* ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.
- ರೇಣುಕ ಕೋಡಗುಂಟಿ. (2009). *ಕರ್ನಾಟಕದಲ್ಲಿ ಶವಸಂಸ್ಕಾರ.* ಬಂಡಾರ ಪ್ರಕಾಶನ.
- ಸಣ್ಣರಾಮ. (1999). *ಲಂಬಾಣಿ ಸಂಸ್ಕೃತಿ.* ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
- Nanjundaiah. H.V and A.K Iyer. (1928). *The Mysore Tribes and Castes Vol- IV.* University of Mysore.